**ದಿನಾಂಕ 30.11.2024** **CC 414/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಬಿ ಜಿ ಬಿ ವಕೀಲರಿಂದಃ

ನಾನು ಡಿ.ಎಡ್ ಪದವಿದರೆ. ನನಗೆ 34 ವರ್ಷ ವಯಸ್ಸು. ಆರೋಪಿಯ ವಯಸ್ಸು ನನಗೆ ಗೊತ್ತಿಲ್ಲ. ಆರೋಪಿಯ ಆಧಾರ್ ಕಾರ್ಡ್‌ನ ಆಧಾರದ ಮೇಲೆ ಆತನಿಗೆ 24 ವರ್ಷ ವಯಸ್ಸು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನನ್ನ ಗಂಡನಿಗೆ ಸೇರಿದ ಅರ್ಧ ಎಕರೆ ಜಮೀನು ಇದೆ. ನನ್ನ ಗಂಡನಿಗೆ ಸೇರಿದ ಹಿಟ್ಟಿನ ಗಿರಣಿ ಇದೆ. ಆರೋಪಿಯ ಹೆಸರಿನಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಯು ನನಗೆ ಟಾಟಾ ಮ್ಯಾಜೀಕ್ ಮಾಹನದ ಮಾರಾಟದ ಕಾಲಕ್ಕೆ ಪರಿಚಯವಾಗಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಪರಿಚಯ ಈ ಹಿಂದೆ ಹೇಳಿದ ಪೂರ್ವದಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿ ನನಗೆ ಪೆಸ್ ಬುಕ್ ನಲ್ಲಿ ಪ್ರೆಂಡ್ ಆಗಿದ್ದರು ಎಂದು ನುಡಿಯುತ್ತಾರೆ. ನನ್ನ ಮೊಬಲ್ ನಂ. 8861745674 ಎಂದರೆ ಸರಿ. ಆರೋಪಿಗೆ ಆತನ ಮೊಬೈಲ್ ನಂಬರ್ ನ್ನು ನಾನೆ ಕೇಳಿ ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ವಿಚಾರವಾಗಿ ಒಂದು ಚಾಯಾಚಿತ್ರವನ್ನು ತೋರಿಸಲಾಗಿ, ಅದರಲ್ಲಿ ಸಾಕ್ಷಿಯು ಆರೋಪಿಗೆ ಸಂದೇಶ ಕಳುಹಿಸಿದ್ದು, ಸಾಕ್ಷಿಯು ನೋಡಿ ಒಪ್ಪಿದ್ದರಿಂದ, ಸದರಿ ಚಾಯಾಚಿತ್ರವನ್ನು ನಿಡಿ.1 ಎಂದು ಗುರುತಿಸಲಾಯಿತು. ಈ ಮೇಲೆ ಹೇಳಿದ ನನ್ನ ಮೊಬಲ್‌ನ ಸಂಸ್ಯೆಯಿಂದ ಆತನ ಮ್ಯೊಬಲ್ ನಂಬರ್ ನ್ನು ಕೇಳಿ ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಕುಟುಂಬ ಸಮೇತ ಪ್ರವಾಸಕ್ಕೆ ಹೋಗುವ ಕಾರಣಕ್ಕಾಗಿ, ನಮಗೆ ರೂಟ್ ನ್ನು ಕೇಳಲು ಮೊದಲನೆ ಬಾರಿಗೆ ಮೆಸೆಜ್ ನ್ನು ಕಳುಹಿಸಿದ್ದೆ. ನನ್ನ ಗಂಡನಿಗೆ ಸೇರಿದ ಟಾಟಾ ಮ್ಯಾಜಿಕ್ ವಾಹನ ಇರುವ ಬಗ್ಗೆ ಪೋಲಿಸರಿಗೆ ಯಾವುದಾದರೂ ದಾಖಲೆಯನ್ನು ಕೊಟ್ಟಿದ್ದಿರಾ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 01.03.2023 ರಂದು ಗಲಾಟೆ ಆಗಿದೆ ಎಂದು ಹೇಳಲಾದ ದಿನ ರಮೇಶ್ ಮತ್ತು ರುದ್ರೇಶ್ ರವರು ಮಲೆಬೆನ್ನೂರು ಮತ್ತು ಬೀರಗೊಂಡನಹಳ್ಳಿ ಗ್ರಾಮದವರು. ಪಿರ್ಯಾದಿಯನ್ನು ನಾನೇ ಬರೆದಿರುತ್ತೇನೆ. ರಮೇಶ್ ಮತ್ತು ರುದ್ರೇಶ್ ರವರು ನನ್ನ ದೂರಿನಲ್ಲಿ ಹೇಳಿದಂತೆ ನಮ್ಮ ಗ್ರಾಮದವರು ಅಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಗಲಾಟೆಯಲ್ಲಿ ಆರೊಪಿಯು ನನ್ನ ಬಟ್ಟೆಯನ್ನು ಹಿಡಿದು ಎಳೆದಾಡಿದನು ಎಂದು ಹೇಳಿದ್ದು, ನಾನು ಪೋಲಿಸರಿಗೆ ಬಟ್ಟೆಯನ್ನು ಕೊಟ್ಟಿರುವುದಿಲ್ಲ. ರಮೇಶ್ ಮತ್ತು ರುದ್ರೇಶ್ ಗೌಡರವರು ನಮ್ಮ ಸಂಬಂಧಿಕರು ಎಂದರೆ ಸರಿ. ಶಿವಕುಮಾರ ಮತ್ತು ಮಂಜುನಾಥ ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಆರೋಪಿ ನನಗೆ 2 ರಿಂದ 3 ತೊಂದರೆ ಕೊಟ್ಟಿರುತ್ತಾನೆ ಎಂದು ಹೇಳಿ ಬರೆಯಿಸಿದ್ದು, ಆದರೆ ಯಾವ ದಿನಾಂಕ, ತಿಂಗಳು, ವರ್ಷ ಎಂದು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು 2 ರಿಂದ 3 ಬಾರಿ ತೊಂದರೆ ಕೊಟ್ಟ ಬಗ್ಗೆ ನಾನು ಪೋಲಿಸರಿಗೆ ದೂರನ್ನು ಕೊಟ್ಟಿದ್ದು, ಆಗ ಪೋಲಿಸರು ಹಿಂಬರಹ ಕೊಟ್ಟಿದ್ದು, ಸದರಿ ದಾಖಲೆಯನ್ನು ನಾನು ಮುಂದಿನ ಮುದ್ದತ್ತಿಗೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ನನ್ನ ಗಂಡನಿಗೆ ಪವನ್

ಮತ್ತು ಪುನಿತ್ ಎನ್ನುವವರು ಎದೆಗೆ ಹೊಡೆದರು ಎಂದು ಹೇಳಿದ್ದು, ಆಗ ನನ್ನ ಗಂಡನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಆರೋಪಿಯು ಸಾಕ್ಷಿಯ ಮೊಬೈಲ್ ನಂಬರಿಗೆ ಮಾಡಿದ ಆನ್ ಲೈನ್ ಹಣ ಪಾವತಿ ಮಾಡಿದ ಬಗ್ಗೆ 3 ಛಾಯಾಚಿತ್ರಗಳನ್ನು ತೋರಿಸಿ, ಆರೋಪಿಯು 3500/-ರೂ. 300/-ರೂ. 700/- ರೂ., 10000/-ರೂ. , 7000/- ರೂ., 4500/- ರೂಗಳನ್ನು ಫೋನ್ ಪೆ ಮೂಲಕ ಕಳುಹಿಸಿರುತ್ತಾರೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಆರೋಪಿಯು ಆನ್ ಮೂಲಕ ಹಣ ಪಾವತಿ ಮಾಡಿ, ನನ್ನಿಂದ ನಗದು ಹಣವನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 3 ಛಾಯಾಚಿತ್ರಗಳನ್ನು ನಿಡಿ.2 ರಿಂದ 4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ.

Sd/-
ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ